2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ121/2014

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸರ್ಫರಾಜ್ | ಪಿಡಬ್ಲ್ಯೂ - 2 |
| ತಂದೆಯ ಹೆಸರು | - | ಹುಸೇನಬ್ಬ | ಸಿಡಬ್ಲ್ಯೂ - 2 |
| ವಯಸ್ಸು | - | 34 ವರ್ಷ | |
| ಉದ್ಯೋಗ | - | ಚಾಲಕ | |
| ವಾಸ ಸ್ಥಳ | - | ಮಂಗಳೂರು | |

ದಿನಾಂಕಃ 06.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1, ಚಾಸಾ.3, ಚಾಸಾ.4, ಚಾಸಾ.5, ಚಾಸಾ.6, ಚಾಸಾ.7, ಚಾಸಾ.8, ಚಾಸಾ.9, ಚಾಸಾ.10 ರವರು ಗೊತ್ತು ಮತ್ತು ಮೃತ ಕಬೀರ್ ಗೊತ್ತು. ಪ್ರಮೋದ್ ಎಂಬ ವ್ಯಕ್ತಿ. ಆರೋಪಿ ನವೀನ್ ನಾಯ್ಕ ಗೊತ್ತು. ಆತನನ್ನು ತನಿಕೋಡು ಚೆಕ್ ಪೋಸ್ಟ್ ಬಳಿ ನೋಡಿದ್ದೇನೆ.

2. ದಿನಾಂಕ 18.04.2014 ರಂದು ರಾತ್ರಿ 9.00 ಗಂಟೆಗೆ ಮಂಗಳೂರಿನಿಂದ ಬದ್ರುದ್ದೀನ್ ಎಂಬುವವರು ಆಗುಂಬೆಯ ಬಳಿ ಇರುವ ಹೊಸೂರಿನಲ್ಲಿ ದನಗಳನ್ನು ತೆಗೆದುಕೊಂಡು ಬರಲು ನಮ್ಮನ್ನು ಪಿಕ್ ಅಪ್ ವಾಹನದಲ್ಲಿ ಕಳುಹಿಸಿದ್ದರು. ನಾವು ರಾತ್ರಿ 10.30 ಗಂಟೆಗೆ ಹೊಸೂರಿಗೆ ಹೋದೆವು. ಅಲ್ಲಿ ಹೈದರ್ ಅಲಿ ಎಂಬುವವರ ಬಳಿ ನಾವು ದನಗಳನ್ನು ಖರೀದಿಸಿದೆವು. ಸದರಿ ದನಗಳನ್ನು ನಾವು ಪಿಕ್ ಅಪ್ ವಾಹನದಲ್ಲಿ ಹಾಕಿಕೊಂಡು

ರಾತ್ರಿ 1.30 ಗಂಟೆಗೆ ಹೊಸೂರಿನಿಂದ ಹೊರಟೆವು. ಬೆಳಗಿನ ಜಾವ 3.30 ಗಂಟೆ ಸುಮಾರಿಗೆ ತನಿಕೋಡ್ ಚೆಕ್ ಪೋಸ್ಟ್ ಬಳಿ ಬಂದೆವು. ಸದರಿ ಚೆಕ್ ಪೋಸ್ಟಿನ ಗೇಟನ್ನು ಹಾಕಲಾಗಿತ್ತು. ಆಗ ಚಾಸಾ.3 ರಫೀಕ್ ಗೇಟ್ ಪಾಸನ್ನು ತೆಗೆದುಕೊಂಡು ಬರಲು ಹೋದನು. ಆಗ ಆರೋಪಿ ಮತ್ತು ಇತರೆ ಐದು ಜನ ಎ ಎನ್ ಎಫ್ ನವರು ಅಲ್ಲಿ ಇದ್ದರು. ಆರೋಪಿಯ ಬಳಿ ಒಂದು ರೈಫಲ್ ಇತ್ತು. ಆಗ ಆರೋಪಿ ವಾಹನದಲ್ಲಿ ಏನು ಇದೆ ಎಂದು ಕೇಳಿದರು. ಆಗ ಮೃತ ಕಬೀರ್ ವಾಹನದಲ್ಲಿ ದನಗಳು ಇರುವುದಾಗಿ ತಿಳಿಸಿದರು. ಆಗ ಆರೋಪಿ ನಮಗೆ ವಾಹನದಿಂದ ಕೆಳಗೆ ಇಳಿಯುವಂತೆ ಹೇಳಿದರು. ಆಗ ಆರೋಪಿ ನಮ್ಮನ್ನು ಕುರಿತು ನೀವು ಮುಸಲ್ಮಾನರು ಇದೇ ರೀತಿ ಕೆಟ್ಟ ಕೆಲಸಗಳನ್ನು ಮಾಡುತ್ತೀರಿ ಎಂದು ನಮಗೆ ಬೈದನು. ಆಗ ಮೃತ ಕಬೀರ್ ನಾವು ಕಳ್ಳತನ ಮಾಡಿಕೊಂಡು ಬಂದಿರುವುದಲ್ಲ, ದನಗಳನ್ನು ಖರೀದಿಸಿಕೊಂಡು ಬಂದಿದ್ದೇವೆ, ನಮಗೆ ಆ ರೀತಿ ಕೆಟ್ಟದಾಗಿ ಬೈಯ್ಯಬೇಡಿ ಎಂದು ಹೇಳಿದರು. ಆಗ ಆರೋಪಿ ಕಬೀರ್ ನನ್ನು ದೂಡಿ ನನಗೆ ಎದುರು ಮಾತನಾಡುತ್ತೀಯಾ ಎಂದು ಹೇಳಿ ತನ್ನ ಬಳಿ ಇದ್ದ ರೈಫಲ್ ನ್ನು ತೆಗೆದನು. ಆಗ ನಾವು ಅಲ್ಲಿಂದ ಓಡಲಾರಂಭಿಸಿದೆವು. ಆಗ ಆರೋಪಿ ರೈಫಲ್ ನಿಂದ ಕಬೀರನ ಬೆನ್ನಿಗೆ ಶೂಟ್ ಮಾಡಿದನು. ಆಗ ಕಬೀರ್ ಕೆಳಗೆ ಬಿದ್ದನು. ಅದನ್ನು ನೋಡಿ ನಾನು ಕಾಡಿನೊಳಗೆ ಓಡಿ ತಪ್ಪಿಸಿಕೊಂಡೆನು. ಉಳಿದವರು ಏನಾದರೂ ಎಂದು ನನಗೆ ಗೊತ್ತಿಲ್ಲ. ಕಾಡಿನಲ್ಲಿ ಜಿಗಣೆಗಳು ನನ್ನ ಕಾಲಿಗೆ ಕಚ್ಚಿದವು. ಆಗ

ನನ್ನ ಕಾಲಿನಿಂದ ರಕ್ತ ಬಂದಿತು. ಬೆಳಕಾದ ಬಳಿಕ ನಾನು ರಸ್ತೆಗೆ ಬಂದೆನು. ರಸ್ತೆಯಲ್ಲಿ ಹೋಗುತ್ತಿದ್ದ ವಾಹನಗಳಿಗೆ ನಾನು ಕೈ ಅಡ್ಡ ಹಾಕಿ ನಿಲ್ಲಿಸುವಂತೆ ಕೇಳುತ್ತಿದ್ದೆನು, ಆದರೆ ಯಾವುದೇ ವಾಹನಗಳು ನಿಲ್ಲಿಸಲಿಲ್ಲ. ಆಗ ನನ್ನನ್ನು ಯಾರಾದರೂ ಕೊಂದು ಹಾಕಬಹುದು ಎಂದದು ಭಾವಿಸಿ ನಾನು ಪುನಃ ಕಾಡಿನೊಳಗೆ ಹೋಗಿ ಸ್ವಲ್ಪ ಹೊತ್ತು ಕೂತುಕೊಂಡೆನು. ನನ್ನ ಕಾಲಿನಿಂದ ರಕ್ತ ಸುರಿಯುತ್ತಿತ್ತು ಮತ್ತು ನಾನು ಊಟವನ್ನು ಮಾಡದ ಕಾರಣ ನನಗೆ ತಲೆ ಸುತ್ತು ಬಂದು ಪ್ರಜ್ಞೆ ಕಳೆದುಕೊಂಡು ಬಿದ್ದೆನು. ನನಗೆ ಎಚ್ಚರವಾದಾಗ ಕತ್ತಲೆಯಾಗಿತ್ತು. ನನಗೆ ಹಸಿವಾಗಿತ್ತು, ಸುಸ್ತಾಗುತ್ತಿತ್ತು, ಕಾಲಿನಲ್ಲಿ ರಕ್ತ ಬರುತ್ತಿತ್ತು ಹಾಗಾಗಿ ಯಾರಾದರೂ ಕೊಂದರೆ ಕೊಲ್ಲಲಿ ಎಂದು ಪುನಃ ರಸ್ತೆಗೆ ಬಂದೆನು. ಆಗ ನಾನು ಒಂದು ವಾಹನಕ್ಕೆ ಕೈ ಅಡ್ಡ ಹಾಕಿದೆನು ಅದು ಬಿಳಿ ಬಣ್ಣದ ಮಹೀಂಧ್ರಾ ಸ್ಕಾರ್ಪಿಯೋ ಜೀಪಾಗಿತ್ತು, ಅದರಲ್ಲಿ ಎ ಎನ್ ಎಫ್ ಸಿಬ್ಬಂದಿಗಳು ಇದ್ದರು. ಅವರು ನನ್ನನ್ನು ಕುರಿತು ನೀನು ಸರ್ಫರಾಜ್ ಅಲ್ಲವೇ ಎಂದು ಕೇಳಿದರು. ಆಗ ನಾನು ಹೌದು ಎಂದು ಹೇಳಿದೆನು. ಆಗ ಅವರು ನನ್ನನ್ನು ಜೀಪಿನಲ್ಲಿ ಕೂರಿಸಿಕೊಂಡು ಕೆರೆಕಟ್ಟೆಯಲ್ಲಿದ್ದ ಎ ಎನ್ ಎಫ್ ಕ್ಯಾಂಪಿಗೆ ನನ್ನನ್ನು ಕರೆದುಕೊಂಡು ಹೋದರು. ನಂತರ ಅಲ್ಲಿಗೆ ಶೃಂಗೇರಿ ಪೊಲೀಸರು ಬಂದು ನನ್ನನ್ನು ಶೃಂಗೇರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು.

3. ಮಾರನೇ ದಿನ ನಮ್ಮ ಮನೆಯವರು ಶೃಂಗೇರಿ ಪೊಲೀಸ್ ಠಾಣೆಗೆ ಬಂದರು. ಆಗ ಪೊಲೀಸರು ನನ್ನನ್ನು ಅವರೊಂದಿಗೆ ಕಳುಹಿಸಿದರು. ದಿನಾಂಕ 25.04.2014 ರಂದು ಸಿ ಐ ಡಿ ಅಧಿಕಾರಿಗಳು ನನ್ನನ್ನು ವಿಚಾರಿಸಿದರು, ನಾನು ಅವರಿಗೆ ಹೇಳಿಕೆಯನ್ನು ನೀಡಿದ್ದೇನೆ.
4. ಆರೋಪಿ ನವೀನ್ ನಾಯ್ಕ ಕಬೀರನಿಗೆ ಶೂಟ್ ಮಾಡಲು ಬಳಸಿದ್ದ ರೈಫಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಎ ಕೆ 47 ರೈಫಲ್ ನ್ನು ನೋಡಿ ಆರೋಪಿ ಕಬೀರನಿಗೆ ಶೂಟ್ ಮಾಡಲು ಬಳಸಿದ್ದ ರೈಫಲ್ ಅದೇ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.